ಕರ್ನಾಟಕ ಸರ್ಕಾರ

ಸಂಖ್ಯೆ: ಪಿಯು 187 ಸಿಬ್ಬಂದಿ ಸಿಆರ್-3 ಉನೇ 2015-16.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ: 28-02-2017.

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 012.

ಮಾನ್ಯರೆ,

ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರ ನೇರ ನೇಮಕಾತಿ ಕುರಿತು.

ಉಲ್ಲೇಖ: ಈ ಕಚೇರಿ ಸಮ ಸಂಖ್ಯೆ ಪತ್ರ ದಿನಾಂಕ : 25-02-2016.

*****

ಉಲ್ಲೇಖಿತ ಪತ್ರವನ್ನು ಮುಂದುವರೆಸುತ್ತಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರ ನೇರ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ 08-05-2015ರ ಅಧಿಸೂಚನೆಯಲ್ಲಿ ಉಪನ್ಯಾಸಕ ಹುದ್ದೆಗಳ ಮೀಸಲಾತಿ ಪಟ್ಟಿಯಲ್ಲಿ ವ್ಯವಹಾರ ಅಧ್ಯಯನ ಎಂದು ನಮೂದಿಸಿ ಹುದ್ದೆಗಳ ಮೀಸಲಾತಿ ಪಟ್ಟಿ ಸಲ್ಲಿಸಲಾಗಿತ್ತು. ಉಲ್ಲೇಖಿತ ಪತ್ರದಲ್ಲಿ ವ್ಯವಹಾರ ಅಧ್ಯಯನ ಎಂಬ ವಿಷಯದ ಬದಲಾಗಿ ವಾಣಿಜ್ಯಶಾಸ್ತ್ರ (COMMERCE) ಎಂದು ನಮೂದಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 35 ಡಿಜಿಡಿ 2009 ದಿನಾಂಕ 15-05-2014ರ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿಗಳಲ್ಲಿ ಉಪನ್ಯಾಸಕ ಹುದ್ದೆಗಳ ವಿಷಯಗಳಲ್ಲಿ ವಾಣಿಜ್ಯಶಾಸ್ತ್ರ (COMMERCE) ಎಂದು ನಮೂದಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ ಎರಡೂ ವಿಷಯಗಳನ್ನು ಒಬ್ಬ ಉಪನ್ಯಾಸಕರೇ ಬೋಧಿಸುವುದರಿಂದ ಆ ಎರಡೂ ವಿಷಯಗಳು ಸೇರಿ ವಾಣಿಜ್ಯಶಾಸ್ತ್ರ (COMMERCE) ಎಂದು ನಮೂದಿಸಿ ನೇಮಕಾತಿ ಮಾಡಲಾಗುತ್ತಿದೆ. ದಿನಾಂಕ 15-05-2014 ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಮೂದಿಸಿದಂತೆ ನೇಮಕಾತಿ ಪ್ರಕ್ರಿಯೆಯಲ್ಲಿ ವಾಣಿಜ್ಯಶಾಸ್ತ್ರ (COMMERCE) ಎಂದೇ ಪರಿಗಣಿಸಿ ಮುಂದುವರೆಸಲು ಈ ಮೂಲಕ ತಿಳಿಸಿದೆ.

ತಮ್ಮ ನಂಬುಗೆಯ,

S. K. Sudha

ನಿರ್ದೇಶಕರ ಪರವಾಗಿ
ಪದವಿ ಪೂರ್ವ ಶಿಕ್ಷಣ ಇಲಾಖೆ.